ಶ್ರೀ ಹೆಚ್.ಜಿ. ಗೋವಿಂದೇಗೌಡ :— ಉತ್ತರವನ್ನು 4-5 ದಿವಸಗಳಲ್ಲಿ ತರಿಸಿಕೊಡುತ್ತೇನೆ.

ಶ್ರೀ ಸೈಯ್ಯದ್ ಜುಲ್ಫಿಕರ್ ಹಷ್ಮಿ :— ನನ್ನದೊಂದು ಅಭಿಪ್ರಾಯ ಇದೆ ಸರ್?

ಅಧ್ಯಕ್ಷರು :— ನಿಮ್ಮ ಪ್ರಶ್ನೆಗೆ 4-5 ದಿವಸಗಳಲ್ಲಿ ಉತ್ತರವನ್ನು ತರಿಸಿಕೊಡುತ್ತೇನೆಂದು ಸಚಿವರು ಹೇಳಿದ್ದಾರೆ. ಅವರು ಸಾಮಾನ್ಯವಾಗಿ ಸಮಯವನ್ನು ಕೇಳುವುದಿಲ್ಲ. ಅವರ ಮಾತಿನಲ್ಲಿ ನನಗೆ ಸಂಪೂರ್ಣ ವಿಶ್ವಾಸ ಇದೆ. ಆ ಪ್ರಶ್ನೆಗೆ ಉತ್ತರ ಬಂದಾಗ ನೀವು ಕೇಳಿ, ಈಗ ಅದರ ಬಗ್ಗೆ ಬೇಡ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— 49 ಸಚಿವರಲ್ಲಿ ವಿಶ್ವಾಸ ಇಲ್ಲ, ಅವರ ಮೇಲೆ ಮಾತ್ರ ವಿಶ್ವಾಸ ಇದೆಯೇ?

ಅಧ್ಯಕ್ಷರು :— ಹಾಗೆ ಅಲ್ಲ. ಕೆಲವರಲ್ಲಿ ವಿಶ್ವಾಸ ಇದೆ, ಆ ಕೆಲವರಲ್ಲಿ ಇವರು ಒಬ್ಬರು. ಕೆಲವರು ಸಮಯವನ್ನು ಕೇಳುತ್ತಾ ಇರುತ್ತಾರೆ, ಉತ್ತರ ಮಾತ್ರ ಕಳುಹಿಸುವುದಿಲ್ಲ. ಆದರೂ ಅವರ ಮೇಲೆ ವಿಶ್ವಾಸ ಇದೆ.

<u>ರಾಜ್ಯದಲ್ಲಿರುವ ಆಂಗ್ಲ ಮಾಧ್ಯಮದ ಪ್ರಾಥಮಿಕ ಶಾಲೆಗಳಲ್ಲಿ ನಾಲ್ಕನೇ ತರಗತಿಯವರಿಗೆ ಕನ್ನಡ ಮಾಧ್ಯಮದಲ್ಲಿ ಕಲಿಸುವುದು.</u>

16(372) ಶ್ರೀ ಕುಂಭಿ ಸುಂದರರಾವ್ (ಸುರತ್ಕಲ್) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಇಂಗ್ಲೀಷ್ ಮಾಧ್ಯಮದ ಪ್ರಾಥಮಿಕ ಶಾಲೆಗಳಲ್ಲಿ ನಾಲ್ಕನೇ ತರಗತಿಯವರೆಗೆ ಕನ್ನಡ ಮಾಧ್ಯಮವನ್ನು ಕಲಿಸಬೇಕೆಂದು ಸರ್ಕಾರವು ಕಡ್ಡಾಯಮಾಡಿರುವುದು ನಿಜವೆ; ಹಾಗಿದ್ದಲ್ಲಿ ಅದು ಕಟ್ಟುನಿಟ್ಟಾಗಿ ಜಾರಿಗೆ ಬಂದಿದೆಯೇ; ಬಂದಿಲ್ಲವಾದಲ್ಲಿ ಅದಕ್ಕೆ ಕಾರಣಗಳೇನು?

ಆ) ತರಗತಿವರೆಗಿನ ಶಿಕ್ಷಣ ಮಾಧ್ಯಮವು ಮಕ್ಕಳ ಮಾತೃ

ಇ) ಇಂತಹ ಶಾಲೆಗಳಿಗೆ ಮಾನ್ಯತೆಯನ್ನು ಕೊಡುವಾಗ ಅನುಸರಿಸುವ ಮಾನದಂಡಗಳೇನು; ನಿಯಮಗಳನ್ನು ಉಲ್ಲಂಘಿಸುವವರ ಮೇಲೆ ಸರ್ಕಾರ ಯಾವ ಕ್ರಮ ಕೈಗೊಳ್ಳುವುದು?

ಈ) ಕಾನೂನು ಜಾರಿಗೆ ಬಂದ ಮೇಲೆ ಬಂದಿರುವ ಉಲ್ಲಂಘನೆಯ ಪ್ರಕರಣಗಳು ಎಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು)

ಶ್ರೀ ಹೆಚ್.ಜಿ. ಗೋವಿಂದಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

ಅ) ಸರ್ಕಾರಿ ಆದೇಶ ಸಂಖ್ಯೆ: ಇಡಿ: 28 ಪಿಜಿಸಿ 94 ದಿನಾಂಕ: 29.04.94 ರನ್ವಯ 1994-95ನೇ ಶೈಕ್ಷಣಿಕ ವರ್ಷದಿಂದ ರಾಜ್ಯ ಸರ್ಕಾರದಿಂದ ಅಂಗೀಕೃತವಾದ ಎಲ್ಲಾ ಶಾಲೆಗಳಲ್ಲಿ ಒಂದರಿಂದ ನಾಲ್ಕನೇ ತರಗತಿವರೆಗಿನ ಶಿಕ್ಷಣ ಮಾಧ್ಯಮವು ಮಕ್ಕಳ ಮಾತೃ ಭಾಷೆ ಅಥವಾ ಕನ್ನಡ ಭಾಷೆಯಾಗಿರುತ್ತದೆ. ಆದರೆ ಕೆಲವು ಖಾಸಗಿ ಶಾಲಾ ಆಡಳಿತ ಮಂಡಳಿಯವರು ರಾಜ್ಯ ಸರ್ಕಾರದ ಭಾಷಾ ನೀತಿಯ ಆದೇಶವನ್ನು ಪ್ರಶ್ನಿಸಿವೆ. ರಾಜ್ಯ ಉಚ್ಚ ನ್ಯಾಯಾಲಾಯವು ಇಂತಹ ಶಾಲೆಗಳ ಯಥಾಸ್ಥಿತಿ ಮುಂದುವರಿಸುವಂತೆ ಹಾಗೂ ಈ ವಿಷಯದ ಮೇಲೆ ಸರ್ವೋಚ್ಚ ನ್ಯಾಯಾಲಯದಲ್ಲಿ ಇರುವ ಮತ್ತೊಂದು ಪ್ರಕರಣವು ಇತ್ಯರ್ಥವಾಗುವವರೆಗೆ ಇದರ ವಿಚಾರಣೆಯನ್ನ ಮುಂದೂಡಿದೆ.

ಆ) ಸಾಮಾನ್ಯವಾಗಿ ಶಾಲೆಗಳಿಗೆ ಮಾನ್ಯತೆಯನ್ನ ನೀಡುವಾಗ ಈ ಕೆಳಗಿನ ಮಾನದಂಡಗಳನ್ನು ಪರಿಗಣಿಸಲಾಗುವುದು.

1. 1ರಿಂದ 4ನೇ ತರಗತಿಯವರೆಗೆ ಕನ್ನಡ ಮಾಧ್ಯಮ ಅಥವಾ ಮಕ್ಕಳ ಮಾತೃಭಾಷೆಯಲ್ಲ ಬೋಧಿಸುತ್ತಿರಬೇಕು.
2. ಶಾಲೆಯನ್ನು ಪ್ರಾರಂಭಿಸಲು ಇಲಾಖೆಯಿಂದ ಅನುಮತಿ ಪಡೆದಿರಬೇಕು. ಸಂಸ್ಥೆಯು ನೋಂದಣಿಯಾಗಿರಬೇಕು.
3. ಅರ್ಹ ಶಿಕ್ಷಕರನ್ನು ನೇಮಕ ಮಾಡಿಕೊಂಡಿರಬೇಕು
4. ಸರ್ಕಾರದಿಂದ ಹೊರಡಿಸಿದ ಸುತ್ತೋಲೆ : ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿರಬೇಕು.
5. ಮೂಲಭೂತ ಸೌಲಭ್ಯಗಳನ್ನು ಸಹ ಒದಗಿಸಿರಬೇಕು.
6. ಸಮಗ್ರ ಶಿಕ್ಷಣ ಮಸೂದೆಯನ್ವಯ ಶಾಲೆಯನ್ನು ನೋಂದಣಿ ಮಾಡಿಸಿರಬೇಕು.
7. ಭಾಷಾ ನೀತಿಯನ್ನು ಕಡ್ಡಾಯವಾಗಿ ಪಾಲಿಸಿರಬೇಕು. ನಿಯಮಾನುಸಾರ ನಡೆಸದ ಶಾಲೆಗಳ ಆಡಳಿತ ಮಂಡಳಿಗೆ ನೋಟೀಸ್ ನೀಡಿ ಶಾಲೆಯ ಅನುಮತಿ ಹಿಂದೆ ಪಡೆಯಬಹುದು : ಮಾನ್ಯತೆ ರದ್ದುಪಡಿಸಬಹುದಾಗಿರುತ್ತದೆ.

ಇ) ರಾಜ್ಯದ ಭಾಷಾ ನೀತಿ ಉಲ್ಲಂಘಿಸಿರುವ ಹಲವಾರು ಶಾಲಾ ಪ್ರಕರಣಗಳು ಎಲ್ಲಾ ಜಿಲ್ಲೆಗಳಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಆದರೆ ನ್ಯಾಯಾಲಯವು ಸದ್ಯಕ್ಕೆ ಯಥಾಸ್ಥಿತಿ ಮುಂದುವರಿಸಲು ನೀಡಿರುವ ಆದೇಶದ ಹಿನ್ನಲೆಯಲ್ಲಿ ಈ ಬಗ್ಗೆ ಮುಂದಿನ ಬೆಳವಣಿಗೆಗಾಗಿ ಕಾಯಲಾಗಿದೆ.

ಶ್ರೀ ಕುಂಭ ಸುಂದರ್ ರಾವ್ :— ಅಧ್ಯಕ್ಷರೆ, ರಾಜ್ಯದಲ್ಲಿರುವ ಇಂಗ್ಲೀಷ್ ಮಾಧ್ಯಮ ಶಾಲೆಗಳಲ್ಲಿ 4ನೇ ತರಗತಿಯವರೆಗೆ ಕನ್ನಡ ಕಡ್ಡಾಯವೆಂದು ಏನು ಕಾನೂನು ಜಾರಿಗೆ ಬಂದಿದೆ ಅದು ಕಟ್ಟುನಿಟ್ಟಾಗಿ ಜಾರಿಗೆ ಬರುತ್ತದಾ ಎಂದು ನಾನು ಪ್ರಶ್ನೆ ಮಾಡಿದ್ದೆ. 1994-95 ರಿಂದ ಕಾನೂನು ಜಾರಿಗೆ ಬಂದಿದೆ. ಆಮೇಲೆ ಹೈಕೋರ್ಟಿಗೆ ಆ ಪಾರ್ಟಿಯವರು ಹೋದದ್ದರಿಂದ ಆ ಕಾನೂನು ಜಾರಿಗೆ ಬರುತ್ತಿಲ್ಲವೆಂದು ಉತ್ತರ ಬಂದಿದೆ. ನಾನು ಸಚಿವರನ್ನು ಕೇಳುತ್ತಿದ್ದೇನೆ, ಈ ತರಹ ಕನ್ನಡ ಮಾಧ್ಯಮದಲ್ಲಿ ಕನ್ನಡ ಕಡ್ಡಾಯ ಆಗಬೇಕು ಎಂಬ ಸ್ಥಿತಿ ಏನು ಇದೆ. ಅಂತಹ ಸ್ಥಿತಿ ನಿರ್ಮಾಣ ಆಗುವುದಕ್ಕೆ ಸಾಧ್ಯವೇನು? 1994-95ರಲ್ಲಿ ಈ ಆದೇಶ ಬಂದಮೇಲೆ ಅವರು ಕೋರ್ಟಿಗೆ

ಯಾವಾಗ ಹೋದರು. ಅವರು ಕೋರ್ಟಿಗೆ ಹೋದಮೇಲೆ ಕನ್ನಡ ಮಾಧ್ಯಮ ಶಾಲೆಗಳಿಗೆ ಇಂಗ್ಲೀಷ್ ಮಾಧ್ಯಮದ ಇಂಗ್ಲೀಷ್ ಶಾಲೆಗಳಲ್ಲಿ ಕನ್ನಡ ಕಡ್ಡಾಯ ಎಂಬ ನೀತಿಯನ್ನು ತಿಲಾಂಜಲಿಯಾಗಿ ನೀವು ಕೈ ಬಿಟ್ಟಿದ್ದೀರಾ? ಅದಕ್ಕೆ ಮತ್ತೆ ನೀವು ಅನುಮತಿಯನ್ನು ಕೊಟ್ಟಿದ್ದೀರಿ ಆದರೆ ಅಲ್ಲಿ ಇಂಗ್ಲೀಷ್ ಮಾಧ್ಯಮದಲ್ಲಿ ಶಿಕ್ಷಣ ಕೊಡುತ್ತಾರೆ, ಕನ್ನಡದಲ್ಲಿ ಇಲ್ಲ ಎಂಬ ಸ್ಥಿತಿಯಾಗಿದೆ. ಇದಕ್ಕೆ ನನಗೆ ಉತ್ತರ ಬೇಕಾಗಿದೆ. ಇದು ರಾಜ್ಯದ ಕನ್ನಡಿಗರ ಹಿತವನ್ನು ಕಾಯುವ ಪ್ರಶ್ನೆಯಾಗಿದೆ. ನಮ್ಮ ಮಕ್ಕಳನ್ನು ಭಾಷಾದರಿದ್ರರನ್ನಾಗಿ ಮಾಡಿ, ಆ ಕಡೆ ಒಳ್ಳೆಯ ಇಂಗ್ಲೀಷ್ ಬರಲಿಲ್ಲ, ಈ ಕಡೆ ಕನ್ನಡವು ಬರಲಿಲ್ಲ ಎಂಬ ಸ್ಥಿತಿಯು ಸರ್ಕಾರದ ನೀತಿ ಆಗಬಾರದು. ಅದಕ್ಕಾಗಿ ನಾನು ಕೇಳುತ್ತಿದ್ದೇನೆ, ಈ ರೀತಿಯಾದ ಒಂದು ಸ್ಥಿತಿ ಬದಲಾವಣೆಯಾಗುವುದಕ್ಕೆ ಕೋರ್ಟಿಗೆ ಹೋಗಿದ್ದೆ. ಆ ಕೋರ್ಟಿನಿಂದ ಸರ್ಕಾರದಿಂದ ಏನು ಕೆಲಸ ನಡೆದಿದೆ ಈ ಅವಶ್ಯಕತೆಯನ್ನು ಸರ್ಕಾರ ಗಮನಿಸಿದೆಯೇ ಇದಕ್ಕೆ ಉತ್ತರ ಬೇಕಾಗಿದೆ.

ಅಧ್ಯಕ್ಷರು :— ಮಾನ್ಯ ಗೋವಿಂದೇಗೌಡರೆ, ನಿಮ್ಮ ಉತ್ತರ ದ್ವಂದ್ವವಾಗಿದೆ. ಯಾವ ಕಂಡೀಶನ್ ಅನುಸರಿಸಿ ನೀವು ಮಾನ್ಯತೆ ಕೊಡುತ್ತೀರಿ? ಆ ಕಂಡೀಶನ್‌ನಲ್ಲಿ 1-4-7ನ್ನು ನೋಡಿ, ಒಂದನೆಯದು 1ರಿಂದ 4ನೇ ತರಗತಿಯವರೆಗೆ ಕನ್ನಡ ಮಾಧ್ಯಮ ಅಥವಾ ಮಕ್ಕಳ ಮಾತೃಭಾಷೆಯಲ್ಲಿ ಭೋದಿಸುವುದು. 4ನೆಯದು ಸರ್ಕಾರ ಹೊರಡಿಸಿದ ಸುತ್ತೋಲೆಗಳನ್ನು ಮತ್ತು ಆದೇಶಗಳನ್ನು ಕಡ್ಡಾಯವಾಗಿ ಪಾಲಿಸುತ್ತಿರಬೇಕು. 7ನೆಯದು ಭಾಷಾ ನೀತಿಯನ್ನು ಕಡ್ಡಾಯವಾಗಿ ಪಾಲಿಸಿರಬೇಕೆಂದು ಇದೆ. ನೀವೂ ಅವರಿಗೆ ಅನುಮತಿ ಕೊಡುವಾಗ ಆ ಶರತ್ತುಗಳನ್ನು ಪೂರೈಸಿದ್ದರೆ ನೀವು ಅವರಿಗೆ ಮಾನ್ಯತೆ ಕೊಡುತ್ತೀರಿ. ಅವರು ಮಾನ್ಯತೆ ಪಡೆದುಕೊಂಡ ಮೇಲೆ ನಿಮ್ಮ ನೀತಿ ಬಗ್ಗೆ ಅವರು ಪ್ರಶ್ನೆ ಮಾಡಿ ಕೋರ್ಟಿಗೆ ಹೋಗುತ್ತಾರೆ ಇದು ಹೇಗೆ? ನೀವು ಪ್ರಾಜ್ಞರು ಇದ್ದೀರಿ, ನೀವೇ ಯೋಚನೆ ಮಾಡಿ. ಹಾಗಾದರೆ ನಿಮ್ಮ ಅಧಿಕಾರಿಗಳು ಈ ಎಲ್ಲಾ ನಿಬಂಧನೆಗಳನ್ನು ಬದಿಗೆ ಒತ್ತಿ ಮಾನ್ಯತೆ ಕೊಟ್ಟಿರಬೇಕು, ತಕ್ಷಣ ಮಾನ್ಯತೆಯನ್ನು ಸಂಸ್ಥೆಯಿಂದ ಹಿಂದಕ್ಕೆ ಪಡೆದುಕೊಳ್ಳಿ. ನಾನು ಈ ಪ್ರಶ್ನೆಯನ್ನು ತಡೆಹಿಡಿಯುತ್ತೇನೆ, ಮಾನ್ಯ ಮಂತ್ರಿಗಳು ಅಧಿಕಾರಿಗಳ ಜೊತೆಗೆ ಚರ್ಚೆ ಮಾಡಲಿ, ಅದಕ್ಕೆ ಸಮರ್ಪಕವಾದ ಉತ್ತರ ತೆಗೆದುಕೊಂಡು ಬರಲಿ, ಏಕೆಂದರೆ, ಇದು ಬಹಳ ಪ್ರಮುಖವಾದಂಥ ಪ್ರಶ್ನೆ.

ಶ್ರೀ ವಾಟಾಳ್ ನಾಗರಾಜ್ :— ಇದುವರೆಗೆ ಸರ್ಕಾರದ ನೀತಿ ಏನು ಅವರಿಗೆ ಗೊತ್ತಿಲ್ಲವೆ ಕನ್ನಡ ಮಾಧ್ಯಮದಲ್ಲಿ ಎಲ್ಲಿಯವರೆಗೆ ಶಿಕ್ಷಣ ಆಗಬೇಕೆನ್ನುವುದು ಸರ್ಕಾರಕ್ಕೆ ಗೊತ್ತಿದೆ. ಇದರ ಬಗ್ಗೆ ಹೊಸದಾಗಿ ಏನು ಚರ್ಚೆಯಾಗಬೇಕಾಗಿಲ್ಲ.

ಅಧ್ಯಕ್ಷರು :— ಕೆಲವು ಸಲ ಕೆಲಸದ ಒತ್ತಡದಿಂದ ಆಗುತ್ತದೆ. ಕೆಲವು ಸಲ ಮಾಹಿತಿಗಳನ್ನು ತರಿಸಿ ಕೊಡುವುದು ಹೆಚ್ಚು ಕಡಿಮೆಯಾಗುತ್ತದೆ. ಇದನ್ನು ತಡೆ ಹಿಡಿದಿದ್ದೇನೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರವನ್ನು ತರಿಸಿ ಕೊಡುತ್ತೇನೆಂದು ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ :— ಅಧ್ಯಕ್ಷರೆ, ಸಮಯವನ್ನು ಕೊಡುವುದಕ್ಕೆ ನನ್ನ ಅಭ್ಯಂತರ ಏನು ಇಲ್ಲ. ತಮಗೆ ನಾನು ಕೇಳುತ್ತಿದ್ದೇನೆ. ಇಂತಹ ಸಮಸ್ಯೆಗಳಿಗೆ ತೀರ್ಮಾನವಾಗಿ ಹೋಗಿರುತ್ತದೆ.

ಅಧ್ಯಕ್ಷರು :— ಈ ವಿಷಯದಲ್ಲಿ ಸ್ಪಷ್ಟತೆ ಇರಬೇಕೆಂದು ನಮಗೆ ಸರ್ಕಾರದ ಉದ್ದೇಶ ಗೊತ್ತಾಗಬೇಕಿನ್ನುವ ದೃಷ್ಟಿಯಿಂದಲೇ ಅವಕಾಶ ಕೊಡುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ :— ನಾನು ಇದನ್ನು ಸ್ವಾಗತಿಸುತ್ತೇನೆ. ಈಗಾಗಲೇ ಕನ್ನಡ ಮಾಧ್ಯಮ ಎಲ್ಲಿಯವರೆಗೆ ಇರಬೇಕೆಂದು ತೀರ್ಮಾನವಾಗಿದೆ. ಆ ತೀರ್ಮಾನದ ಬಗ್ಗೆ ನಿರ್ದಿಷ್ಟವಾದ ಒಂದು ನಿಲುವು ಇದೆ. ಹೊಸದಾಗಿ ಅವರು ಏನು ನಿಲುವು ತೆಗೆದುಕೊಳ್ಳಬೇಕಾಗಿಲ್ಲ. ತಮಗೆ ಗೊತ್ತಿದೆ, ಕನ್ನಡ ಸಾಹಿತ್ಯ ಸಮ್ಮೇಳನವನ್ನು ಮಾನ್ಯ ಮುಖ್ಯ ಮಂತ್ರಿಗಳು ಉದ್ಘಾಟನೆ ಮಾಡಿದ್ದಾರೆ. ಎಸ್.ಎಸ್.ಎಲ್.ಸಿ.ಯವರೆಗೆ ಕನ್ನಡವನ್ನು ಕಡ್ಡಾಯವಾಗಿ ನೀಡಬೇಕೆಂದು ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಸರ್ಕಾರದ ನೀತಿ ಏನು? ಆ ಅಧ್ಯಕ್ಷರ ಭಾಷಣ ಏನು? ಅದರ ವ್ಯವಸ್ಥೆ ಏನು?

ಕುಣಿಗಲ್ ಬಳಿ ಟ್ರಾಮ್ ಸೆಂಟರ್ ತೆರೆಯುವ ಬಗ್ಗೆ.

17(150) ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಾರ್ವಜನಿಕ ಆಸ್ಪತ್ರೆಯು ಹೆದ್ದಾರಿ 48 ರಲ್ಲಿ ಇದ್ದು ಈ ಪ್ರದೇಶದಲ್ಲಿ ಆಗುತ್ತಿರುವ ಅಪಘಾತಗಳ ಹಿನ್ನೆಲೆಯಲ್ಲಿ ಟ್ರಾಮ್ ಸೆಂಟರ್ ತೆರೆಯುವ ಆಲೋಚನೆ ಸರ್ಕಾರಕ್ಕಿದೆಯೇ?

ಆ) ಹಾಗಿದ್ದಲ್ಲಿ ಅದನ್ನು ಎಂದಿನಿಂದ ತೆರೆಯಲಾಗುವುದು?

ಡಾ : ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :—

ಅ) ಇಲ್ಲಾ

ಆ) ಈಗಾಗಲೇ ನೆಲಮಂಗಲದಲ್ಲಿ ಅಪಘಾತ ಚಿಕಿತ್ಸಾ ಕೇಂದ್ರ (ಟ್ರಾಮಸೆಂಟರ್) ಕಾರ್ಯನಿರ್ವಹಿಸುತ್ತಿರುವುದರಿಂದ ಕುಣಿಗಲ್ ಹಾಗೂ ನೆಲಮಂಗಲಕ್ಕೆ 50 ಕಿ.ಮಿ. ಅಂತರವಿರುವುದರಿಂದ ಇನ್ನೊಂದು ಕೇಂದ್ರವನ್ನು ಪ್ರಾರಂಭಿಸುವ ಅವಶ್ಯಕತೆ ಬರುವುದಿಲ್ಲ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ :— ಅಧ್ಯಕ್ಷರೆ, ಆ ಆಸ್ಪತ್ರೆ ಕುಣಿಗಲ್‌ನ ರಾಷ್ಟ್ರೀಯ ಹೆದ್ದಾರಿಯಲ್ಲಿ ಇದೆ. ಸಾರ್ವಜನಿಕರ ಆಸ್ಪತ್ರೆಯನ್ನು ಕೂಡ ತೆಗೆದಿರುತ್ತಾರೆ. ಇತ್ತೀಚೆಗೆ ಅಲ್ಲಿ ಬಹಳ ಅಪಘಾತಗಳು ಆಗುತ್ತವೆಂದು ಸರ್ಕಾರ ಒಪ್ಪಿಕೊಳ್ಳುತ್ತಿದೆ. ಅಲ್ಲಿ ಒಂದು ಟ್ರಾಮ ಸೆಂಟರ್ ತೆರೆಯಬೇಕೆಂದು ನಾನು ಅನೇಕ ಸಲ ಸಚಿವರಿಗೆ ಮನವಿಯನ್ನು ಮಾಡಿದ್ದೇನೆ. 50 ಕಿ.ಮೀ. ಅಂತರದ ನೆಲಮಂಗಲದಲ್ಲಿ ಇದೆ ಅದರ ಅವಶ್ಯಕತೆ ಇಲ್ಲವೆಂದು ಅವರು ಹೇಳುತ್ತಿದ್ದಾರೆ. ಟ್ರಾಮ್ ಸೆಂಟರ್ 50 ಕಿ.ಮೀ. ಒಳಗಡೆ ಇರಬೇಕೆಂದು ಸರ್ಕಾರದ ನಿಬಂಧನೆ ಏನಾದರೂ ಇದೆಯೇ? ಟ್ರಾಮ್ ಸೆಂಟರ್ ತೆಗೆಯುವ ಬಗ್ಗೆ ಸರ್ಕಾರ ಏನಾದರೂ ಒಂದು ಮಾರ್ಗಸೂಚಿಯನ್ನು ಹಾಕಿಕೊಂಡಿದೆಯೇ?